## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

ಓ.ಎಸ್.04/2019

ಸಾಕ್ಷಿಯನ್ನು ದಿಃ **25.09.2025** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ** SNN **ವಕೀಲರಿಂದಃ-**

**ಇಲ್ಲ ಎನ್ನುತ್ತಾರೆ**.

ಪಾಟೀ ಸವಾಲುಃ ವಾದಿ ಪರ ಶ್ರೀ. **NSG** ವಕೀಲರಿಂದಃ-

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಿಖರವಾಗಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸರ್ವೇ ನಂಬರ್ 5/ಪಿ 10 ಈಗ ಹೊಸದಾಗಿ ಸರ್ವೆ ನಂಬರ್ 5 ಆಗಿದೆ. ದಾವಾ ಸ್ವತ್ತಿನ ಖಾತೆ ನನ್ನ ಹೆಸರಿನಲ್ಲಿದೆ. ನಾನು ಸಹಿ ಮಾಡುತ್ತೇನೆ. ನಿಪಿ-4 ರ ಪುಟ ಸಂಃ 2ರ ಹಿಂಭಾಗದಲ್ಲಿರುವ ಭಾವಚಿತ್ರ ಮತ್ತು ಸಹಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ಭಾವಚಿತ್ರ ಮತ್ತು ಸಹಿ ತನ್ನದು ಎಂದು ಗುರುತಿಸಿದ ಕಾರಣ ಸದರಿ ಭಾಗವನ್ನು ಒಟ್ಟಾಗಿ ನಿಪಿ-4(ಐ) ಎಂದು ಗುರುತಿಸಲಾಯಿತು. ನಿಪಿ-4 ರ ಪುಟ ಸಂಃ 3ರ ಹಿಂಭಾಗದಲ್ಲಿರುವ ಭಾವಚಿತ್ರಗಳು ಮತ್ತು ಸಹಿಗಳನ್ನು ತೋರಿಸಲಾಗಿ ಸಾಕ್ಷಿ ಸದರಿ ಭಾವಚಿತ್ರಗಳು ಮತ್ತು ಸಹಿಗಳು 2 ರಿಂದ 5ನೇ ಪ್ರತಿವಾದಿಯರದ್ದು ಎಂದು ಗುರುತಿಸಿದ ಕಾರಣ ಸದರಿ ಭಾಗವನ್ನು ಒಟ್ಟಾಗಿ ನಿಪಿ-4(ಜೆ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-4ರಲ್ಲಿರುವ ತನ್ನ ಹಾಗೂ 2 ರಿಂದ 4ನೇ ಪ್ರತಿವಾದಿಯರ ಸಹಿಗಳನ್ನು ಗುರುತಿಸಿದ್ದು, ನಿಪಿ-4ರ 1 ಮತ್ತು 2ನೇ ಪುಟದಲ್ಲಿರುವ 1ನೇ ಪ್ರತಿವಾದಿಯ ಸಹಿಗಳನ್ನು ಒಟ್ಟಾಗಿ ನಿಪಿ-4(ಕೆ) ಎಂದು, 2ನೇ ಪ್ರತಿವಾದಿಯ ಸಹಿಗಳನ್ನು ಒಟ್ಟಾಗಿ ನಿಪಿ-4(ಎಲ್) ಎಂದು, 3ನೇ ಪ್ರತಿವಾದಿಯ ಸಹಿಗಳನ್ನು ನಿಪಿ-4(ಎಂ) ಎಂದು, 4ನೇ ಪ್ರತಿವಾದಿಯ ಸಹಿಗಳನ್ನು ನಿಪಿ-4(ಎನ್) ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿನ ಪೂರ್ವಕ್ಕೆ ಸೋಮಣ್ಣರವರ ಜಮೀನು, ಪಶ್ಚಿಮಕ್ಕೆ ಗೌರಮ್ಮರವರ ಜಮೀನು, ಉತ್ತರಕ್ಕೆ ಪಾಪಯ್ಯರವರ ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ ಎಂದರೆ ಸರಿ. ಸಾಕ್ಷಿಗೆ ನಿಪಿ-4ರ 2ನೇ ಪುಟದ ಹಿಂಭಾಗದಲ್ಲಿರುವ 2 ಭಾವಚಿತ್ರಗಳನ್ನು ತೋರಿಸಿ ಸದರಿ ಭಾವಚಿತ್ರಗಳು ವಾದಿಯದ್ದು ಎಂದರೆ ಸಾಕ್ಷಿ ಸರಿ ಎಂದು ಉತ್ತರಿಸಿದ್ದು, ಆ ಕಾರಣದಿಂದ ಸದರಿ ಭಾಗಗಳನ್ನು ನಿಪಿ-4(ಓ) ಮತ್ತು (ಪಿ) ಎಂದು ಗುರುತಿಸಲಾಯಿತು. ನಿಪಿ-4

ರಲ್ಲಿರುವ ಎಲ್ಲಾ ಭಾವಚಿತ್ರಗಳನ್ನು ಮತ್ತು ಸಹಿಗಳನ್ನು ಹುಣಸೂರು ಉಪನೊಂದಾಣಾಧಿಕಾರಿಗಳ ಮುಂದೆ ಮಾಡಲಾಗಿದೆ ಎಂದರೆ ಸರಿ. ನಿಪಿ–4ರ ದಾಖಲೆಗೆ ಕ್ರಯದ ಕರಾರಿನ ಪೂರಕ ಪತ್ರದ ಮಾತುಕತೆಯಾದ ನಂತರ ನೋಂದಣಿಯಾದಾಗ ಸಹಿ ಮಾಡಿದ್ದೇವೆ ಎಂದರೆ ಸರಿ. ನಿಪಿ–4 ರ ಪ್ರಕಾರ ಮುಂಗಡ ಹಣ ರೂ. 5 ಲಕ್ಷ ಕೊಟ್ಟು ಉಳಿಕೆ ರೂ. 8,48,750/– ಎಂದು ಅದರಲ್ಲಿ ಬರವಣಿಗೆ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ರೂ. 5 ಲಕ್ಷ ಕೊಟ್ಟಿದ್ದು ಉಳಿಕೆ 8,48,750/– ಕೊಟ್ಟಿಲ್ಲ ಹಾಗೂ ಯಾವುದು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಪಿ–4ರ ಪತ್ರವನ್ನು ಬರೆದವರು ಹೆಚ್.ಆರ್ ಜಗದೀಶ್ ಎಂದರೆ ಇರಬಹುದು. ಸದರಿ ದಾಖಲೆಗೆ ಸಾಕ್ಷಿದಾರರಾದ ಮಹದೇವ್ ಎಂಬುವವರು ನನ್ನ ಊರಿನವರು ಎಂದರೆ ಸರಿ. ನಿಪಿ–4 ಕ್ಕೆ ಮಹದೇವು ರವರು ಸಾಕ್ಷಿಯಾಗಿ ಸಹಿ ಹಾಕಿದ್ದಾರೆ ಎಂದರೆ ಸರಿ. ನನಗೆ ವಕೀಲರಿಂದ ನೋಟಿಸ್ ಬಂದಿಲ್ಲ. ಸಾಕ್ಷಿಗೆ ನಿಪಿ–3ರ ಕ್ರಯದ ಕರಾರಿನಲ್ಲಿ ಪುಟ ಸಂಖ್ಯೆ 1 ರಿಂದ 3 ರಲ್ಲಿರುವ ಸಹಿಗಳನ್ನು ತೋರಿಸಲಾಗಿ ಸದರಿ ಸಹಿಗಳು ತನ್ನ ಹಾಗೂ 2 ಮತ್ತು 3ನೇ ಪ್ರತಿವಾದಿಯರದ್ದು ಎಂದು ಸಾಕ್ಷಿ ಒಪ್ಪಿಕೊಂಡ ಕಾರಣ ಸಾಕ್ಷಿಯ ಸಹಿಗಳನ್ನು ಒಟ್ಟಾಗಿ ನಿಪಿ–3(ಹೆಚ್) ಎಂದು, 2ನೇ ಪ್ರತಿವಾದಿಯ ಸಹಿಗಳನ್ನು ಒಟ್ಟಾಗಿ ನಿಪಿ–3(ಐ) ಎಂದು, 3ನೇ ಪ್ರತಿವಾದಿಯ ಸಹಿಗಳನ್ನು ಒಟ್ಟಾಗಿ ನಿಪಿ–3(ಜೆ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ–3ರ ಪುಟ ಸಂಖ್ಯೆ 2ರ ಹಿಂಭಾಗದಲ್ಲಿರುವ ಭಾವಚಿತ್ರಗಳು ಮತ್ತು ಸಹಿಯನ್ನು ತೋರಿಸಿ ವಾದಿಯ ಸಹಿ ಮತ್ತು ಭಾವಚಿತ್ರ ಎಂದು ಸಾಕ್ಷಿ ಒಪ್ಪಿಕೊಂಡ ಕಾರಣ ಸದರಿ ಭಾಗಗಳನ್ನು ಕ್ರಮವಾಗಿ ನಿಪಿ–3(ಕೆ) ಮತ್ತು ನಿಪಿ–3(ಎಲ್) ಎಂದು ಗುರುತಿಸಲಾಯಿತು. ನಿಪಿ–3ಕ್ಕೆ ನನ್ನ ಊರಿನವರಾದ ಮಹದೇವ ಮತ್ತು ವೆಂಕಟೇಶ ರವರು ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ ಎಂದರೆ ಸರಿ. ಸದರಿ ದಾಖಲೆಯನ್ನು ಹೆಚ್.ಆರ್.ಜಗದೀಶ್ ರವರು ಬರೆದಿದ್ದಾರೆ ಎಂದರೆ ಸರಿ. ನಿಪಿ–3ರ ಕ್ರಯದ ಕರಾರು ಆಗುವಾಗ ನಮಗೆ ರೂ. 3 ಲಕ್ಷ ಮುಂಗಡವಾಗಿ ಸಂದಾಯವಾಯಿತು ಎಂದರೆ ಸರಿ. ಸಾಕ್ಷಿ ಮುಂದುವರಿದು, ಕ್ರಯ ಮಾಡುತ್ತೇನೆ ಎಂದು ಒಪ್ಪಿರಲಿಲ್ಲ ಎಂಬುದಾಗಿ ನುಡಿಯುತ್ತಾರೆ. ನಿಪಿ–3ರ ದಾಖಲೆ ಕೂಡ ಉಪನೊಂದಣಾಧಿಕಾರಿಗಳ ಮುಂದೆ ನೋಂದಣಿಯಾಗಿದೆ ಎಂದರೆ ಸರಿ.

ನಾನು ಸಾಮಾನ್ಯವಾಗಿ ಯಾವುದೇ ದಾಖಲೆಗೆ ಓದಿ ತಿಳಿದುಕೊಂಡೇ ಸಹಿ ಹಾಕುತ್ತೇನೆ ಎಂದರೆ ಸರಿ. ನಿಪಿ-3ರ ದಾಖಲೆಗೆ ನಾನು ಓದಿ ತಿಳಿದುಕೊಂಡೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು 4ನೇ ತರಗತಿ ಓದಿದ್ದೇನೆ. 3ನೇ ಪ್ರತಿವಾದಿ ಡಿಪ್ಲೊಮೊ ಓದಿದ್ದಾರೆ. 2ನೇ ಪ್ರತಿವಾದಿ 7ನೇ ತರಗತಿ ಓದಿದ್ದಾರೆ. 2ನೇ ಪ್ರತಿವಾದಿ ಇಂಗ್ಲಿಷ್ ನಲ್ಲಿ ಸಹಿ ಹಾಕುತ್ತಾರೆ ಮತ್ತು ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. 3ನೇ ಪ್ರತಿವಾದಿ ಇಂಗ್ಲಿಷ್ ನಲ್ಲಿ ಸಹಿ ಹಾಕುತ್ತಾರೆ ಮತ್ತು ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ನನಗೆ ಯಾವುದೇ ದಾಖಲೆ ಬಂದರೂ ಕೂಡ ನಾನು ಪತ್ನಿ ಮತ್ತು ಮಗನ ಮೂಲಕ ಓದಿಸಿಯೇ ಸಹಿ ಹಾಕುತ್ತೇನೆ ಎಂದರೆ ಅವರು ಬೆಂಗಳೂರಿನಲ್ಲಿದ್ದಾರೆ. ಅವರಿಬ್ಬರು ಈಗ್ಗೆ 5-6 ವರ್ಷಗಳಿಂದ ಬೆಂಗಳೂರಿನಲ್ಲಿದ್ದಾರೆ. ಅದಕ್ಕೂ ಮೊದಲು ಇಲ್ಲಿಯೇ ಇದ್ದರು ಎಂದರೆ ಸರಿ. ಅವರು ಇಲ್ಲಿ ಇದ್ದಾಗ ನಾನು ಯಾವುದೇ ಪತ್ರದ ಬಗ್ಗೆ ಅವರಿಂದ ಓದಿಸಿ ತಿಳಿದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಾನು ಎಲ್ಲಾ ದಾಖಲೆಗಳಿಗೆ ಓದಿ ತಿಳಿದುಕೊಂಡೇ ಸಹಿ ಹಾಕುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಕೀಲರಿಂದ ಪ್ರತ್ಯುತ್ತರ ನೋಟಿಸ್ ಕೊಡಿಸಿಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು